




ಬವಣೆ ಮೀರುವ ಪರಿ: ಮೂವರು ಮಕ್ಕಳನ್ನು ಕಷ್ಟದಲ್ಲೇ ಬೆಳೆಸಿದ ಡಯಾನಾ ಹಾಗೂ ಅವಳ ಗಂಡನಿಗೆ ಈ ಕ್ರಿಸ್‌ಮಸ್ ದೀಪಗಳನ್ನು ಕುಟುಂಬ ಸಮೇತ ಬಂದು ನೋಡುವುದು ಸದಾ ಸಂಭ್ರಮದ ವಿಷಯ. ನೂರು ಪೌಂಡುಗಳನ್ನು ಈ ಸಂಜೆಗಾಗಿಯೇ ಎತ್ತಿಡುತ್ತಾರೆ ಪ್ರತೀ ಡಿಸೆಂಬರಿನಲ್ಲಿ. ಕೆಲ ವರ್ಷಗಳಿಂದ ತಮ್ಮ ತಮ್ಮ ಕೆಲಸ, ಕುಟುಂಬಗಳಲ್ಲಿ ತೊಡಗಿಕೊಂಡ ಮಕ್ಕಳನ್ನು ಈ ಸಂಭ್ರಮಕ್ಕೆ ಒಳಗೊಳ್ಳಲು ಸಾಧ್ಯವಾಗುತ್ತಿಲ್ಲ. ಆದರೇನು? ಮೊಮ್ಮಕ್ಕಳು ಬರುವರಲ್ಲ! ಇಮ್ಮಡಿ ಉತ್ಸಾಹದಲ್ಲಿ ಮೊಮ್ಮಕ್ಕಳಿಗೆ ದೀಪ ತೋರಿಸುತ್ತಾ ತಾವೂ ಖುಷಿಪಡುತ್ತಾರೆ ಈ ಜೋಡಿ.

ಕಣ್ಮನಕ್ಕೆ ಉಲ್ಲಾಸ ತರುವ ಈ ದೀಪಗಳನ್ನು ವೀಕ್ಷಿಸಲು ಪರಿಪರಿಯ ಟೂರುಗಳು ಇಲ್ಲಿ ಲಭ್ಯ. ಎರಡರಿಂದ ಮೂರು ಗಂಟೆಗಳ ಟ್ಯಾಕ್ಸಿ ಟೂರುಗಳು, ಟುಕ್‌ಟುಕ್ (ಸೈಕಲ್ ಟಾಂಗಾ ಗಾಡಿಯಂತಹದ್ದು) ಮೇಲೆ ಆಸೀನರಾಗಿ ಕೈಯಲ್ಲಿ ಹಬೆಯಾಡುವ ವೈನ್ ಹಿಡಿದು ಲೆಸ್ಟರ್ ಸ್ಕ್ವೇರ್, ಟವರ್ ಬ್ರಿಜ್, ಮಿಲೇನಿಯಂ ಬ್ರಿಜ್, ಸೋಹೋ ಬೀದಿಗಳಲ್ಲಿ ಮನದಣಿಯೆ ತಿರುಗಾಡಿಸುವ ಸೌಲಭ್ಯ, ಡಬಲ್ ಡೆಕ್ಕರ್ ಬಸ್ಸಿನಲ್ಲಿ ಕೂತು ದೀಪಗಳ ಸೊಬಗು ನೋಡುವ ಅವಕಾಶ ಇವೆಲ್ಲವೂ ಇವೆ.

ಮೊಮ್ಮಕ್ಕಳ ಜತೆಗೆ ಥೇಮ್ಸ್ ನದಿಗುಂಟ ನಡೆಯುತ್ತಾ, ನಮ್ಮಲ್ಲಿನ ಚಕ್ಕುಲಿಯನ್ನು ಹೋಲುವ ಸಿಹಿ ಖಾದ್ಯ ಚ್ಯೂರೋಸ್ ಮೆಲ್ಲುತ್ತಾ, ಮೊಳಕೈ ಸೊಂಟದ ಮೇಲಿಟ್ಟು ಡಯಾನಾ ನಿಧಾನ ನಡೆಯುತ್ತಿದ್ದರೆ, ಅರವತ್ತು ಮೀರಿದ ಅವಳ ಗಂಡ ಓಡು ನಡುಗೆಯಲ್ಲಿ ಬಂದು ತನ್ನ ಬಲಗೈಯನ್ನು ಡಯಾನಾಳ ಕೈಗೆ ಸರಪಳಿಯಾಗಿಸಿ ಅವಳ ಮುಖ ನೋಡುತ್ತಾನೆ, ಹದಿನಾರರ ಪೋರನಂತೆ ಕಣ್ಣು ಹೊಡೆಯುತ್ತಾನೆ.

***

ಬೆನ್ನೆಲುಬು ಕಟಗಡುವ ಈ ಚಳಿಗಾಲದಲ್ಲಿ, ಮುಖದಲ್ಲೊಂದು ಅಯಾಚಿತ ಮುಗುಳ್ನಗೆ ಹೊತ್ತು ಲಂಡನ್‌ನ ಬೀದಿಗಳಲ್ಲಿ ಅನಾಮಿಕಳಂತೆ ಅಲೆದಾಡುವಾಗ ಈ ರೀತಿಯ ನೂರಾರು ಕಥೆಗಳು ಕಾಣಸಿಗುತ್ತವೆ. ಕಣ್ಣೆದುರಿನ ಚಿತ್ತಾರದ ದೀಪಗಳು, ಏಳು ಸಮುದ್ರದ ಆಚೆಗಿನ ನಮ್ಮೂರ ದೀಪಾವಳಿಯಲ್ಲಿ ಎಣ್ಣೆಯೆರೆದು ಬೆಳಗುವ ದೀವಳಿಗೆಯ ಹಣತೆಗಳ ಅವಳಿಗಳಂತೆ ಕಾಣುತ್ತವೆ.